**ಮೂ.ದಾ.ನಂ. 70/2021**

ಪಿ.ಡಬ್ಲ್ಯು.1

(ಇಂದು ದಿನಾಂಕ: **19-11-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್. ವಕೀಲರಿಂದಃ**

ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ಈ ದಾವೆಯ ಮಾಹಿತಿಯನ್ನು ನನ್ನ ತಂದೆ ಹಾಗೂ ರವಿ ಜೋಶಿ ಇವರು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತಾರೆ. ರವಿ ಜೋಶಿ ಇವರು ಗೋಕರ್ಣದವರಾಗಿರುತ್ತಾರೆ. ಅವರು ನಮ್ಮ ತಂದೆಯವರಿಗೆ 20 ವರ್ಷಗಳಿಂದ ಪರಿಚಯಸ್ಥ,ರಾಗಿರುತ್ತಾರೆ ನಾನು ಸರ್ವೆ ನಂ. 40/2 ಕ್ಕೆ ಸಂಭಂಧಿಸಿದಂತೆ ಈ ದಾವೆಯನ್ನು ದಾಖಲು ಮಾಡಿರುತ್ತೇನೆ. ಸದ್ರಿ ಸರ್ವೆ ನಂಬರದಲ್ಲಿ 15 ಗುಂಟೆ ಜಾಗ ಇದೆ. ಸದ್ರಿ ಜಾಗವು ನನ್ನ ಹೆಸರಿಗೆ ಇದೆ. ನಾನು ಈ ಜಾಗವನ್ನು ಸೀತಾರಾಮ ಶೆಟ್ಟಿ ಇವರಿಂದ ಖರೀದಿ ಮಾಡಿರುತ್ತೇನೆ. ಈ ಜಾಗವನ್ನು ಜೂನ್ 2020 ನೇ ಸಾಲಿನಲ್ಲಿ ಖರೀದಿ ಮಾಡಿರುತ್ತೇನೆ. ಖರೀದಿಯ ಕುರಿತಾಗಿ ದಸ್ತಾವೇಜನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದ್ರಿ ಜಾಗವನ್ನು ಖರೀದಿಸಿದ ದಿನಾಂಕ ನನನೆ ಈಗ ನೆನಪಿಗೆ ಬರುತ್ತಿಲ್ಲ.

ನಾನು ಖರೀದಿಸುವ ಪೂರ್ವದಲ್ಲಿ ಸರ್ವೆ ನಂ. 40 ಹಿಸ್ಸಾ 2 ಜಾಗದಲ್ಲಿ ಒಟ್ಟೂ 20 ಗುಂಟೆ ಕ್ಷೇತ್ರಗಳಿದ್ದವು. ಸರ್ವೆ ನಂ. 40 ಹಿಸ್ಸಾ 2 ರಲ್ಲಿ ರಾಮಾ ನಾರಾಯಣ ಶೆಟ್ಟಿ ಇವರಿಗೆ 15 ಗುಂಟೆ ಹಾಗೂ ಉಮಾಬಾಯಿ ಕೋಂ ಮಹಾಬಳೇಶ್ವರ ಭಟ್ಟ ಗುರುಲಿಂಗ ಇವರಿಗೆ ಭೂ ನ್ಯಾಯ ಮಂಡಳಿಯಿಂದ 5 ಗುಂಟೆ ಜಾಗ ಮಂಜೂರಾಗಿ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ. 40

ಹಿಸ್ಸಾ 2 ರ ಪಶ್ಚಿಮ ದಿಕ್ಕಿಗೆ ಸರ್ವೆ ನಂ. 39 ಹಿಸ್ಸಾ 2 ಇ ಪ್ರತಿವಾದಿಯವರ ಮಾಲೀಕತ್ವಕ್ಕೆ ಒಪ್ಪಿದ ಜಾಗ ಇದೆ ಎಂದರೆ ಸರಿ. ಸರ್ವೆ ನಂ. 39 ಹಿಸ್ಸಾ 2 ಇ ಯ ಪೂರ್ವಕ್ಕೆ ಸರ್ವೆ ನಂ. 40 ಹಿಸ್ಸಾ 2 ಇದೆ ಎಂದರೆ ಸರಿ. ಸದ್ರಿ ಜಾಗದಲ್ಲಿ 5 ಗುಂಟೆ ಜಾಗ ಪ್ರತಿವಾದಿಯರ ಕಬ್ಜಾದಲ್ಲಿ ಇದೆ ಎಂದರೆ ಸರಿಯಲ್ಲ.

ನಿ.ಪಿ.2 ರಲ್ಲಿ ಕಾಣಿಸಿದ 5 ಗುಂಟೆ ಜಾಗವು ಸರ್ವೆ ನಂ. 39 ಹಿಸ್ಸಾ 2 ಇ ಯ ಪೂರ್ವ ದಿಕ್ಕಿನಲ್ಲಿ ಕಾಣಿಸಿದ ಜಾಗವು ಪ್ರತಿವಾದಿಯವರ ಕಬ್ಜಾದಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ. 39 ಹಿಸ್ಸಾ 2 ಇ ಜಾಗವು ಈ ದಾವೆ ದಾಖಲು ಮಾಡುವವರೆಗೂ ಪ್ರತಿವಾದಿಯವರ ಕಬ್ಜಾದಲ್ಲಿ ಇತ್ತು ಎಂದರೆ ಸರಿಯಲ್ಲ. ನಾನು ಸರ್ವೆ ನಂ.40 ಹಿಸ್ಸಾ 2 ರ 15 ಗುಂಟೆ ಖರೀದಿ ಮಾಡುವ ಪೂರ್ವದಲ್ಲಿ ಸದ್ರಿ ಸರ್ವೆ ನಂಬರನ 15 ಗುಂಟೆ ಜಾಗವು ಪೋಡಿ ಪ್ರಕರಣ ನಾವು ಮಾಡಿಸಿದ್ದೇವೆ ಎಂದರೆ ಸರಿ. ಸದ್ರಿ ಪ್ರಕರಣದಲ್ಲಿ ನಮ್ಮ ತಂದೆ ಹಾಗೂ ರವಿ ಜೋಶಿಯವರು ಮುಂದೆ ನಿಂತು ಮಾಡಿದ್ದಾರೆ ಎಂದರೆ ಸರಿ. ಸದ್ರಿ ಪ್ರಕರಣವನ್ನು ಮಾಡುವಾಗ ಪ್ರತಿವಾದಿಯವರಿಗೆ ನೋಟೀಸ ನೀಡಲಿಲ್ಲ ಎಂದರೆ ಸರಿಯಲ್ಲ.

ಎ.ಡಿ.ಎಲ್.ಆರ್ ಇವರು ಮಾಡಿದ ಪೋಡಿ ಪ್ರಕರಣವು ಸರಿಯಾಗಿಲ್ಲ ಎಂದು ಡಿ.ಡಿ.ಎಲ್.ಆರ್, ಕಾರವಾರ ಇವರ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

**ಮೂ.ದಾ.ನಂ. 70/2021**

**ಪಿ.ಡಬ್ಲ್ಯು.1**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ